<u>ಸಾಕ್ಷಿಯನ್ನು ದಿಃ**13.12.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ.ವಕೀಲರಿಂದ:</u>

ವಾದಿ ಹೂಡಿರುವ ದಾವೆಯ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿ ಬಾಳೇನಹಳ್ಳಿ ಗ್ರಾಮದಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಆಸ್ತಿ ಮೂಲತಃ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಬಹಳಷ್ಟು ಜನರಿಗೆ ಬಗೈರ್ ಹುಕುಂ ಸಾಗುವಳಿ ಆಧಾರದ ಮೇಲೆ ಮಂಜೂರಾಗಿರುತ್ತದೆ ಎಂದರೆ ಸರಿ. ಆ ರೀತಿ ಸುಮಾರು 10-15 ಜನರಿಗೆ ಮಂಜೂರಾಗಿರುತ್ತದೆ. ಅದೇ ರೀತಿ ನಮಗೂ ಮಂಜೂರಾಗಿರುತ್ತದೆ ಮತ್ತು ಇನ್ಯಾರಿಗೆ ಮಂಜೂರಾಗಿದೆ ಎಂದು ಅವರುಗಳ ಹೆಸರು ನನಗೆ ಗೊತ್ತಿಲ್ಲ.

ನನ್ನ ತಂದೆಯ ಹೆಸರು ನಂಜಯ್ಯ. ವಾದಿಯ ತಂದೆಯ ಹೆಸರು ನಂಜಯ್ಯ ಎಂದರೆ ಸಾಕ್ಷಿಯು ಚೋಟಯ್ಯ ಎಂದು ನುಡಿಯುತ್ತಾರೆ. ವಾದಿಯ ಹೆಸರು ಚೋಟಯ್ಯ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನನ್ನ ತಕರಾರಿನಲ್ಲಿ ವಾದಿಯ ತಂದೆಯ ಹೆಸರು ಚೋಟಯ್ಯ ಎಂದು ಹೇಳಿರುತ್ತೇನೆ. ನಾನು ಆ ರೀತಿ ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ತನ್ನ ತಂದೆಯ ಹೆಸರನ್ನು ನಂಜಯ್ಯ ಎಂದು ದಾವೆಯಲ್ಲಿ ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಆ ಕುರಿತು ಬರೆದಿರುವುದನ್ನು ನಾನು

ಓದಿ ತಿಳಿದುಕೊಂಡಿರುತ್ತೇನೆ. ವಾದಿಯ ತಂದೆ ಉಳುಮೆ ಮಾಡುತ್ತಿದ್ದ ಜಮೀನಿಗೆ ಮಂಜುರಾತಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಜಮೀನಿನ ವಿಸ್ತೀರ್ಣದ 20 ಗುಂಟೆಗೆ ನನ್ನ ತಂದೆಯ ಹೆಸರು ನಂಜಯ್ಯ ಆಗಿದ್ದು, ಅದನ್ನು ಮೋಸ ಮಾಡಿ ಮಂಜೂರು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತನ್ನ ತಂದೆಯ ಹೆಸರು ಮತ್ತು ತನ್ನ ತಾತನ ಹೆಸರು ನಂಜಯ್ಯ ಎಂದು ನುಡಿಯುತ್ತಾರೆ.

ನಮ್ಮ ತಂದೆಯ ಕಾಲದಿಂದಲೂ 23 ಗುಂಟೆಯಲ್ಲಿ ಬಗೈರ್ ಹುಕುಂ ಸಾಗುವಳಿ ಮಾಡುತ್ತಾ ಬಂದಿದ್ದೇವೆ. ನಾವು ಸರ್ಕಾರಕ್ಕೆ ಅರ್ಜಿ ಸಲ್ಲಿಸುವಾಗ 1 ಎಕರೆ ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದೇವು. ಸರ್ಕಾರ ನಮಗೆ 23 ಗುಂಟೆ ಆಸ್ತಿಯನ್ನು ಮಂಜೂರು ಮಾಡಿರುತ್ತದೆ. ನಾವು 23 ಗುಂಟೆ ಉಳುಮೆ ಮಾಡುತ್ತಿದ್ದು, ಅದು ನಮಗೆ ಮಂಜೂರಾಗಿದೆ ಎಂದು ನಮ್ಮ ತಕರಾರಿನಲ್ಲಿ ಹೇಳಿರುತ್ತೇವೆ. ನನ್ನ ತಕರಾರಿನಲ್ಲಿ ಹೇಳಿರುವ 10 ಗುಂಟೆ ಬಗೈರ್ ಹುಕುಂ ಸಾಗುವಳಿ ಕುರಿತು ನನ್ನ ಬಳಿ ದಾಖಲೆಗಳಿವೆ. ಸದರಿ 10 ಗುಂಟೆ ಮಂಜೂರು ಮಾಡಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೇವು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

23 ಗುಂಟೆ ಜಮೀನು ಸರ್ಕಾರದಿಂದ ಮಂಜೂರಾದ ಮೇಲೆ ಅರ್ಜಿ ಸಲ್ಲಿಸಿ ಸರ್ವೇ ಸ್ಕೆಚ್ ಮಾಡಿಸಿಲ್ಲ ಎಂದರೆ ಸಾಕ್ಷಿಯು ಪೋಡಾಗಿಲ್ಲ ಎಂದು ನುಡಿಯುತ್ತಾರೆ. ಪೋಡು ಆಗದಿದ್ದರೆ ಸರ್ವೇ ನಂ.2/5 ಎಂದು ಹೇಗೆ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು

ಸರ್ಕಾರ 2019 ರಲ್ಲಿ ಒಟ್ಟುಗೂಡಿಸಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.3 ರಲ್ಲಿ ಪೂರ್ವ-ಪಶ್ಚಿಮ-ಉತ್ತರಕ್ಕೆ ಉಳಿಕೆ ಜಮೀನು ಎಂದು ಬರೆದಿದೆ ಎಂದರೆ ಸರಿ. ದಕ್ಷಿಣಕ್ಕೆ ಲಾಹಿ ನಂ.1 ಎಂದು ಇದ್ದು, ಅದು ನಮ್ಮ ಸರ್ವೇ ನಂ.1 ಆಗಿರುತ್ತದೆ. ನನ್ನ ತಕರಾರಿನಲ್ಲಿ ನಮೂದಾಗಿರುವ ಚೆಕ್ಕು ಬಂದಿ ನಿಡಿ.3 ರಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿಯು ತಮ್ಮ 23 ಗುಂಟೆ ಆದ ನಂತರ 10 ಗುಂಟೆ ಕರಾಬು ಇದ್ದು, ನಂತರ ಹಳ್ಳ ಇದೆ ಎಂದು ನುಡಿಯುತ್ತಾರೆ.

ನನ್ನ ತಕರಾರಿನಲ್ಲಿ ಉತ್ತರ ಭಾಗದ ಚೆಕ್ಕು ಬಂದಿ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ಉತ್ತರ ಭಾಗದ ಆಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ.2 ರಲ್ಲಿ 1 ಎಕರೆ ಜಮೀನನಿನಲ್ಲಿ ವಾದಿ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ತಾವು ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.2/5 ರಲ್ಲಿ 10X15 ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತೇವೆ. ಸರ್ವೇ ನಂ.2/5 ರಲ್ಲಿ ಸರ್ಕಾರ ಮಂಜೂರು ಮಾಡಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ಮನೆ ಕಟ್ಟಿದ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ನಾನು ನೋಡಿರುವುದಿಲ್ಲ. ಸದರಿ ದಾವಾ ಆಸ್ತಿಗೂ ಹಾಗೂ ನಮಗೆ ಮಂಜೂರಾಗಿರುವ ಆಸ್ತಿಗೂ ½ ಕಿ.ಮೀ. ಅಂತರವಿದೆ. ದಾವಾ ಆಸ್ತಿಯಲ್ಲಿ ವಾದಿಯ ತಂದೆಯ ಕಾಲದಿಂದಲೂ ಮನೆ ಕಟ್ಟಿಕೊಂಡು ವ್ಯವಸಾಯ

ಮಾಡಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆಯ ಮರಣಾ ನಂತರ ವಾದಿ ಸದರಿ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ವಾದಿ ಮತ್ತು ಅವರ ತಂದೆ ಅರ್ಜಿ ಸಲ್ಲಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಸರ್ವೇ ನಂಬರ್ ತಪ್ಪಾಗಿ ನಮೂದು ಮಾಡಿಲ್ಲದ ಕಾರಣ ಮಂಜೂರಾಗಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಒತ್ತಾಯದ ಮೇರೆಗೆ ರೆವಿನ್ಯೂ ಅಧಿಕಾರಿಗಳು ವಾದಿಯ ತಂದೆ ಸ್ವಾಧೀನಾನುಭವದಲ್ಲಿರಲಿಲ್ಲ ಎಂದು ವರದಿ ಸಲ್ಲಿಸಿದ್ದರೂ ಎಂದರೆ ಸಾಕ್ಷಿಯು ಅವರು ಉಳುಮೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವರದಿಯ ವಿರುದ್ಧ ನಿಪಿ.2 ರಂತೆ ವಾದಿಯ ಕುಟುಂಬದವರು ಅಪೀಲು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅಪೀಲು ಪುರಸ್ಕಾರಗೊಂಡು ವಾದಿಯು ಸ್ವಾಧೀನಾನುಭವದಲ್ಲಿದ್ದಾರೋ ಇಲ್ಲವೋ ಎಂದು ಮರುವರದಿ ಸಲ್ಲಿಸಲು ತಿಳಿಸಲಾಗಿತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.